International Journal of Kannada Research
www.kannadajournal.com

**ISSN: 2454–5813**
IJSR 2016; 2(3): 91-95
© 2016 IJKS
www.kannadajournal.com
Received: 15-04-2016
Accepted: 16-05-2016

**ಎಸ್. ಸುಂದರೇಶ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು,
ಚಿಕ್ಕಮಗಳೂರು

**Correspondence**
**ಎಸ್. ಸುಂದರೇಶ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು,
ಚಿಕ್ಕಮಗಳೂರು

# ಮೂಡಿಗೆರೆ ತಾಲ್ಲೂಕಿನ ಸ್ಥಳನಾಮಗಳು ಮತ್ತು ಶಾಸನಗಳ ಸಂಬಂಧ

**ಎಸ್. ಸುಂದರೇಶ**

ಶಾಸನಗಳು ಮಾನವನ ಬದುಕಿನ ನಿತ್ಯ ಸತ್ಯಗಳನ್ನು ಹೇಳುವ ಆಕರ. ಈ ಶಾಸನಗಳು ಸಂಸ್ಕೃತಿಯ ಪ್ರತಿಬಿಂಬವಾಗಿ, ನಾಡಿನ ಜನ ಜೀವನದ ಜೀವಂತ ಪಳಯುಳಿಕೆಗಳಾಗಿ ಜನ ಸಮುದಾಯದ ಆಚಾರ, ವಿಚಾರಗಳ ದೃಷ್ಟಿಕೋನವನ್ನು ಮತ್ತು ದಿನನಿತ್ಯದ ಬದುಕನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸುವುದು ಶಾಸನಗಳು.

ಶಾಸನದ ಪರಿಕಲ್ಪನೆ ಆಜ್ಞೆ-ರಾಜಾಜ್ಞೆ, ಕಾನೂನು, ನಿಯಮ ಎಂದಿದ್ದರೂ ಶಾಸನಗಳು ಲೋಕದೃಷ್ಟಿಯನ್ನು ಬೀರುತ್ತಾ ಅಂದಿನ ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ಸಂಗತಿಗಳನ್ನು ತೆರೆದಿಡುವ ಪುಸ್ತಕದಂತೆ. ಶಾಸನಗಳ ವಸ್ತು ವಿಭಿನ್ನ ಆಯಾಮಗಳನ್ನು ಹೊಂದಿರುತ್ತದೆ. ಆಯಾ ಕಾಲ ಘಟ್ಟದ ಆಳ್ವಿಕೆಗಳ ಅಂತರ್ ಸಂಬಂಧವನ್ನು ಹೊಂದಿ ವಿಭಿನ್ನ ರೀತಿಯಲ್ಲಿ ವ್ಯಕ್ತಗೊಳ್ಳುತ್ತದೆ. ಹೀಗಾಗಿ ಸಾಹಿತ್ಯದ ಅಂಶಗಳಿಗಿಂತ ಅವುಗಳು ಕೊಡುವ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವಿವರಗಳು ಅತ್ಯಂತ ಮುಖ್ಯವಾದವು”[1] ಎನ್ನುವ ಮಾತು ಗಮನಾರ್ಹವಾದುದು.

ಶಾಸನಗಳು ಮಾನವನ ಸಂಸ್ಕೃತಿಯ ವಿವಿಧ ಕಾಲಘಟ್ಟಗಳ ವಿಭಿನ್ನ ಮುಖಗಳ ವಿಭಿನ್ನ ದೃಷ್ಟಿಕೋನಗಳನ್ನು ತಿಳಿಸುವಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಕಾರಣಗಳಿಂದಾಗಿ ಶಾಸನಗಳು ಸ್ಥಳನಾಮಗಳಲ್ಲಿನ ವಿವಿಧ ಮುಖಗಳ ಅನಾವರಣವಾಗುತ್ತದೆ. “ಕಾವ್ಯ ಜನ ಜೀವನದ ಸಂಭವನೀಯ ಘಟನೆಗಳ ಕಲಾತ್ಮಕ ಅಭಿವ್ಯಕ್ತಿಯಾದರೆ, ಶಾಸನ ಸಂಭವಿಸಿದ ಘಟನೆಗಳ ದಾಖಲೆಯಾಗಿದೆ”[2] ಎಂಬುದು ಶಾಸನದ ಮಹತ್ವವನ್ನು ಕುರಿತು ಹೇಳುತ್ತದೆ.

ಶಾಸನಗಳು ಒಂದಲ್ಲ ಒಂದು ಕಾರಣದಿಂದ ಹಳ್ಳಿಗಳಲ್ಲಿ ಲಭ್ಯವಿರುವುದಿಲ್ಲ. ಪ್ರಾಚೀನ ಕಾಲದ ಉಲ್ಲೇಖಿತ ಸ್ಥಳಗಳನ್ನು ಸಮಕಾಲೀನ ದೃಷ್ಟಿಕೋನದಲ್ಲಿ, ವಸ್ತುನಿಷ್ಟವಾಗಿ ಅಧ್ಯಯನ ಮಾಡುವುದು ಕರಾರುವಕ್ಕಾದ ದಾಖಲೆಯಾಗುತ್ತದೆ. ಏಕೆಂದರೆ ಕೆಲವು ಶಾಸನಗಳು ಅತಿರಂಜಿತ ವರ್ಣನೆಯಿಂದ ಕೂಡಿರಬಹುದು ಅಥವಾ ಉತ್ಪ್ರೇಕ್ಷೆ ಇಲ್ಲದಿರಬಹುದು. ಆದ್ದರಿಂದ ಡಾ. ಎಂ. ಚಿದಾನಂದ ಮೂರ್ತಿಯವರು ಹೇಳುವ ಹಾಗೆ “ಶಾಸನಗಳು ಸಾಹಿತ್ಯದ ತಲಕಾವೇರಿ”[3] ಎನ್ನುವ ಮಾತು ಶಾಸನ ಸಾಹಿತ್ಯದ ನಿರ್ವಚನವನ್ನು ಕುರಿತು ಹೇಳುತ್ತದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ಸುಮಾರು ೧೧೮ ಶಾಸನಗಳು ಉಪಲಬ್ಧವಾಗಿರುವಂತಹವು. ಅವುಗಳಲ್ಲಿ ಅನೇಕ ಶಾಸನೋಕ್ತ ಸ್ಥಳನಾಮಗಳಿವೆ. ಎಲ್ಲ ಸ್ಥಳನಾಮಗಳೂ ಶಾಸನಗಳಲ್ಲಿ ಉಲ್ಲೇಖವಾಗಿವೆ ಎಂದರ್ಥವಲ್ಲ ಮತ್ತು ಉಲ್ಲೇಖಿತ ಸ್ಥಳನಾಮಗಳು ಮಾತ್ರ ಸಂಶೋಧನೆಯ ದೃಷ್ಟಿಯಿಂದ ಮುಖ್ಯ ಎನ್ನುವಂತಿಲ್ಲ. ಮೂಡಿಗೆರೆ ತಾಲ್ಲೂಕಿನ ಶಾಸನಗಳನ್ನು ಸಾಹಿತ್ಯದ, ಮನೋವೈಜ್ಞಾನಿಕ, ಭಾಷಿಕ, ಶೈಲಿ ಮುಂತಾದ ಪ್ರಾಚೀನ ಕಾಲದಲ್ಲಿ ಅಭಿವ್ಯಕ್ತಗೊಂಡ ಸ್ಥಳನಾಮ ಮುಂತಾದ ಅನೇಕ ರೂಪಗಳಲ್ಲಿ ಅಧ್ಯಯನ ಮಾಡಬಹುದು. ಹೀಗಾಗಿ ಶಾಸನಗಳು ಮಾನವ ಬದುಕಿನ ಮೌಲ್ಯಗಳನ್ನು ಕಟ್ಟಿಕೊಡುವ ಬಹುಮುಖ್ಯವಾದ ಆಕರಗಳಾಗಿವೆ ಮತ್ತು ಪೂರ್ವ ಬದುಕಿನ ಎಲ್ಲಾ ಸ್ಥಿತ್ಯಂತರಗಳನ್ನು ದಾಖಲಿಸುತ್ತದೆ.

ಇಲ್ಲಿನ ಅನೇಕ ಸ್ಥಳನಾಮಗಳು ತಮ್ಮ ಪ್ರಾಚೀನ ರೂಪಗಳಲ್ಲಿ ವ್ಯಕ್ತವಾದ ರೂಪ ವ್ಯತ್ಯಾಸ, ಅರ್ಥ ವ್ಯತ್ಯಾಸ, ಭಾಷಾ ವ್ಯತ್ಯಾಸ, ಉಚ್ಛಾರ ವ್ಯತ್ಯಾಸ, ಧ್ವನಿ ವ್ಯತ್ಯಾಸ ಮತ್ತು ವ್ಯಕ್ತಿವಾಚಕವಾಗಿ ಇನ್ನೂ ಬೇರೆ-ಬೇರೆ ರೂಪಗಳನ್ನು ಹೊಂದಿರುವುದು ಗ್ರಹಿಸಬಹುದು. ಆದ್ದರಿಂದ “ಶಾಸನ ಶಾಸ್ತ್ರ ಓದುತ್ತಾ ನಡೆದೆ ಓದಿಸುತ್ತಾ ಸಾಗಿದೆ ಆಳಕ್ಕೆ ಇಳಿದಂತೆ ಶಿಲೆಯ ಮರೆಯ ಸುವರ್ಣವನ್ನು ಕಂಡೆ:”[4] ಎನ್ನುವ ಡಾ. ಎಂ. ಎಂ. ಕಲಬುರ್ಗಿಯವರ ಮಾತು ಅಧ್ಯಯನದ ದೃಷ್ಟಿಯಿಂದ ಬಹಳ ಮುಖ್ಯವಾದುದು. ಆದ್ದರಿಂದ ಶಾಸನಗಳು ನಾಡಿನ ಅಪೂರ್ವ ಸಂಪತ್ತು ಎಂದೇ ಭಾವಿಸಬೇಕು.

| ಶಾ.ಸಂ | ದೊರಕಿದ ಸ್ಥಳ | ಶಾಸನದ ಕಾಲ | ಶಾಸನೋಕ್ತ ಸ್ಥಳನಾಮ | ಪ್ರಸ್ತುತ ಉಚ್ಛರಿಸಲ್ಪಡುತ್ತಿರುವ ಸ್ಥಳನಾಮ |
|---|---|---|---|---|
| 1 | ನಂದಿಪುರ | ಕ್ರಿ.ಶ ೧೧೯೪ | ಮಾಲೆನಾಡು೮ ಯಿನ್ದಳವಳ್ಳಿ[8] | ಮಾಳಿಗನಾಡು<br>ಇಂದ್ರವಳ್ಳಿ |
| 6 | ಕಡಿದಾಳು | ಕ್ರಿ.ಶ ೧೧೯೧ | ಕಿಸುವೊಳಲು[9] | ಕೆಸವೊಳಲು |
| 7 | ಗೋಣೀಬೀಡು | ಕ್ರಿ.ಶ. ೧೫೦೦-೧೬೦೦ | ಗೋಣಿಬೀಡ[1]<br>ಚಿನುಗ[1]<br>ಕಿತ್ತಳಿನಾಡು[1] | ಗೋಣೀಬೀಡು<br>ಚಿನ್ನಿಗ<br>ಕಿತ್ತಲೆಗಂಡಿ |
| 10 | ಗೋಣೀಬೀಡು | ಕ್ರಿ.ಶ ೬೧೬ | ಸಮಾಂಸಿ[22] | ಸಂಸೆ |
| 12 | ದೇವವೃಂದ | ಕ್ರಿ.ಶ ೧೩೭೧ | ದೇವೀವೃಂದ[43] | ದೇವರುಂದ |
| 13 | ದೇವವೃಂದ | ಕ್ರಿ.ಶ ೧೦೦೦ | ಪುಕ್ಕೊಳ್ಳಿ[4] | ವಕ್ಕಳ್ಳಿ |
| 14 | ದೇವವೃಂದ | ಕ್ರಿ.ಶ ೧೫೨೦ | ಗೋಳಿಯಬೀಡು[10]<br>ದೇವವೃಂದ[11]<br>ಕಳಿಚೂರು[12] | ಗೋಣೀಬೀಡು<br>ದೇವರುಂದ<br>ಕಣಚೂರು |
| 15 | ಉಗ್ಗಿಹಳ್ಳಿ | ಕ್ರಿ.ಶ ೧೨೧೬ | ವುಗಳಿ[2] | ಉಗ್ಗೇಹಳ್ಳಿ, ಉಗ್ಗೆಳ್ಳಿ |
| 17 | ಕಣಚೂರು | ಕ್ರಿ.ಶ ೧೦೪೯ | ಕಡಿಚೂರು[10] | ಕಣಚೂರು |
| 18 | ಹಂತೂರು | ಕ್ರಿ.ಶ ೧೧೨೯ | ಶಶಕಪುರ[6]<br>ಹನ್ತಿಯೂರು[30]<br>ಗುತಿÛ[32] | ಅಂಗಡಿ<br>ಹಂತೂರು<br>ಗುತ್ತಿ |
| 19 | ಹಂತೂರು | ಕ್ರಿ.ಶ ೧೪೦೬ | ಹಂತೂರು[7] | ಹಂತೂರು |
| 20 | ಹಂತೂರು | ಕ್ರಿ.ಶ ೧೧೮೮ | ಹನ್ನಿವೂರ[5]<br>ಕಡಿದಾಳ[10] | ಹಂತೂರು<br>ಕಡಿದಾಳು |
| 21 | ಅಂಗಡಿ | ಕ್ರಿ.ಶ ೧೦೫೪ | ಸೊಸೆವೂರ[7] | ಅಂಗಡಿ |
| 25 | ಅಂಗಡಿ | ಕ್ರಿ.ಶ ೧೦೬೩ | ಕಾರಬಯಲು[16] | ಕಾರ್ಬೈಲು |
| 26 | ಅಂಗಡಿ | ಕ್ರಿ.ಶ ೧೧೬೪ | ಸೊಸಊರು[18] | |
| 27 | ಅಂಗಡಿ | ಕ್ರಿ.ಶ ೧೧೦೦ | ಸೊಸೆವುರು[1] | ಅಂಗಡಿ |
| 28 | ಅಂಗಡಿ | ಕ್ರಿ.ಶ ೧೦೬೨ | ಸೊಸೆವೂರು[13] | |
| 31 | ಕಮರಗೋಡು | ಕ್ರಿ.ಶ ೧೧೬೫ | ಕಮಾಱಗೋಡು[4]<br>ಕಂಮಱಗೋಡು[9] | ಕಮ್ಮರಗೋಡು |
| 34 | ಫಲ್ಗುಣಿ | ಕ್ರಿ.ಶ ೧೨೦೦ | ಗುತ್ತಿ[4] | ಗುತ್ತಿ |
| 36 | ಫಲುಣಿ | ಕ್ರಿ.ಶ೧೧೪೪ | ಕೊಳಿನೂರು[3]<br>ಕೊಳೆವೂರ[15] | ಕೋಳೂರು |
| 39 | ಕೊಟ್ರಗೆರೆ | ಕ್ರಿ.ಶ ೧೧೭೯ | ಸೊಸೆವೂರ[5] | ಅಂಗಡಿ |
| 40 | ತರಿವೆ | ಕ್ರಿ.ಶ ೧೭೦೦-೧೮೦೦ | ತರುವ[3] | ತರುವೆ |
| 43 | ಕಳಸ | ಕ್ರಿ.ಶ ೧೧೫೪ | ಕಳಶ[6] | ಕಳಸ |
| 45 | ಕಳಸ | ಕ್ರಿ.ಶ ೧೫೧೬ | ಯೆಡಊರು[15]<br>ಬಂಗರಗೊಡಗಿ[15]<br>ಉತ್ತುಗಾರ[25]<br>ಅನೆಮೊಘ[45]<br>ಕಾರಗದ್ದೆ[47] | ಎಡೂರು<br>ಬಂಗಾರ ಕೊಡಿಗೆ<br>ಉತ್ತಗಾರ್<br>ಆನ್‌ಮೊಗೆ<br>ಕಾರಗದ್ದೆ |
| 46 | ಕಳಸ | ಕ್ರಿ.ಶ ೧೫೫೨ | ಕಲುಗೋಡು[31]<br>ಮರಸಣಿಗೆ[44] | ಕಲ್ಲುಗೋಡು<br>ಮರಸಣಿಗೆ |
| 47 | ಕಳಸ | ಕ್ರಿ.ಶ ೧೫೪೭ | ನಿಡುವಲೆ[13]<br>ಕಲುಗೋಡಲು[14] | ನಿಡುವಾಳೆ<br>ಕಲ್ಲುಗೋಡು |
| 48 | ಕಳಸ | ಕ್ರಿ.ಶ೧೫೧೬ | ಕಲುಗೋಡು[26]<br>ಹೋರಿನಾಡು[28]<br>ಗೂರಳಿಕೆ[30]<br>ಸವಸೆ[31]<br>ಎಡೆಊರ[35]<br>ಯದರುಗೋಡು[68]<br>ಕಳಕೊಂಡ[48] | ಕಲ್ಲುಗೋಡು<br>ಹೊರನಾಡು<br>ಗೂರ್ಲಿಕೆ<br>ಸಂಸೆ<br>ಎಡೂರು<br>ಎಡ್ರಗೋಡು<br>ಕಳಕೋಡು |
| 54 | ಕಳಸ | ಕ್ರಿ.ಶ ೧೪೧೯ | ಹೆರಡುಕಿ[16] | ಹೇರಡಿಕೆ |
| 57 | ಕಳಸ | ಕ್ರಿ.ಶ೧೪೯೩ | ಸುಳಿಮಾನಿ[35] | ಸುಳಿಮನೆ |
| 59 | ಕಳಸ | ಕ್ರಿ.ಶ ೧೩೭೦ | ತನುವಿಡಿ[17]<br>ತನುವಡಿ[33] | ತನುಡಿ<br>ತನುಡಿ |
| 63 | ಕಳಸ | ಕ್ರಿ.ಶ ೧೫೦೦ | ನೆಲ್ಲಿಯಡುಕ[12]<br>ಹೆಂಮಕ್ಕಿ[24]<br>ಯಿದಕಿನಿ[25]<br>ಹೋರುನಾಡು[25] | ನೆಲ್ಯಡ್ಕ<br>ಹೆಮ್ಮಕ್ಕಿ<br>ಇಡಕಿಣಿ<br>ಹೊರನಾಡು |

| | | | | |
|---|---|---|---|---|
| 64 | ಕಳಸ | ಕ್ರಿಶ ೧೪೦೦ | ಬ್ರಹ್ಮಪುರಿ[42]<br>ಕಳತೋಡ[43]<br>ತನುವೀಡ[43]<br>ಕಳಸ್ತನಾಡು[64] | ರುದ್ರಪಾದ<br>ಕಳಕೋಡು<br>ತನುಡಿ<br>ಕಳಸ |
| 65 | ಕಳಸ | ಕ್ರಿ.ಶ ೧೪೦೦ | ಕಳ್ಸ[40] | ಕಳಸ |
| 66 | ಕಳಸ | ಕ್ರಿಶ ೧೫೨೦ | ಸವಸೆ[12]<br>ಬಸುಱುಗಲ್ಲು[12]<br>ಕಾರಮಣ[28]<br>ಹೊಸಮಕ್ಕಿ[28] | ಸಂಸೆ<br>ಬಸಿರಿಕಲ್ಲು<br>ಕಾರ್ಮಣ್ಣು<br>ಹೊಸಮಕ್ಕಿ |
| 68 | ಕಳಸ | ಕ್ರಿ.ಶ ೧೫೨೪ | ಯೆಡದಾಳ[6]<br>ಮಾವಿನಕೇರಿ[27] | ಯಡದಾಳು<br>ಮಾವಿನಕೆರೆ |
| 69 | ಕಳಸ | ಕ್ರಿ ಶ ೧೬೭೯ | ಕಲುಕೊಡಗೆ[21] | ಕಲ್ಲುಕೊಡಗೆ |
| 70 | ಕಳಸ | ಕ್ರಿ ಶ ೧೫೪೨ | ಮರಶಣಿಗೆ[20] | ಮರಸಣಿಗೆ |
| 71 | ಕಳಸ | ಕ್ರಿ ಶ ೧೨೬೮ | ಎಡರಿಗೋಡ[8]<br>ಮರಸಣಿ[21]<br>ಸವಸಿ[27] | ಎಡ್ರಗೋಡು<br>ಮರಸಣಿಗೆ<br>ಸಂಸೆ |
| 75 | ಕಳಸ | ಕ್ರಿ ಶ ೧೪೯೭ | ರುದ್ರಪಾದ[10] | ರುದ್ರಪಾದ |
| 77 | ಕಳಸ | ಕ್ರಿಶ ೧೨೭೭ | ಗೊರಸಿನಹಳ್ಳಿ[8] | ಗೊರಸಿನಹಾಳಿ |
| 80 | ಕಳಸ | ಕ್ರಿಶ ೧೨೪೭ | ಮಾಟರಡಿ | ಮಾಟರಳ್ಳಿ |
| 85 | ಕಳಸ | ಕ್ರಿ ಶ ೧೩೦೦ | ಸುಳ್ಳಿಗೋಡ[24] | ಸುಳಗೋಡು |
| 89 | ಕಳಸ | ಕ್ರಿ ಶ ೧೩೦೦ | ಎಡರಿಗೋಡ[16]<br>ದುಣಿಗೆ[18] | ಎಡ್ರಗೋಡು<br>ದುಂಡಿಗೆ |
| 90 | ಕಳಸ | ಕ್ರಿಶ ೧೩೦೦ | ಬೆಳಗೋಡ[20]<br>ಅಬ್ಬಿಗೊಂಡಂಗೆ[3] | ಬಿಳಗೋಡು<br>ಅಬ್ಬುಗೊಡಿಗೆ |
| 102 | ಹೊರನಾಡು | ಕ್ರಿ ಶ ೧೬೭೫ | ಹೆಬ್ಬೊಳೆ[27] | ಹೆಬ್ಬಾಳೆ |
| 103 | ಹೊರನಾಡು | ಕ್ರಿಶ ೧೬೭೫ | ಹೆಬಳೆ[9] | ಹೆಬ್ಬಾಳೆ |
| 104 | ಹೊರನಾಡು | ಕ್ರಿಶ ೧೫೮೯ | ಗುರುಳಿಕೆ[2]<br>ಮುಂಡನಮಾಯಿ[21]<br>ಅತಿಕೊಡಗೆ[37]<br>ಅಡಕೋಡ[38]<br>ಮಾವಿನಕೆರೆ[38] | ಗೂರ್ಲಿಕೆ<br>ಮುಂಡುಗದ ಮನೆ<br>ಅತ್ತಿಕೊಡಿಗೆ<br>ಅಡಕೊಡು<br>ಮಾವಿನಕೆರೆ |
| 105 | ಕಟ್ಟಿನ ಹೊಳೆ | ಕ್ರಿಶ ೧೭೩೩ | ಕಟ್ಟಿನ ಹೊಳೆ[É5]<br>ಹಾನಂಬಿ[8]<br>ಮರಡಿ[17] | ಕಟ್ನಾಳಿ<br>ಆನಂಬಿ<br>ಮರಡಿ |
| 106 | ಸಂಸೆ | ಕ್ರಿಶ ೧೬೭೫ | ಸಱುಶೆ[3] | ಸಂಸೆ |
| 108 | ರುದ್ರಪಾದ | ಕ್ರಿಶ ೧೩೭೮ | ತಲಗೋಡು[13] | ತಲಗೋಡು |
| 109 | ನೂಚೆ | ಕ್ರಿಶ೧೫೧೫ | ನೂಜಿನ[24]<br>ಸಂಪಾನಿ[44] | ನೂಜಿ<br>ಸಂಪಾನೆ |

ಈಬಗೆಯಾದ ಸ್ಥಳನಾಮಗಳಲ್ಲಿ ಸ್ವರಾರಂಭದ ಸ್ಥಳನಾಮಗಳು, ಸಬಿಂದುಕ ಸ್ಥಳನಾಮಗಳು, ಸಜಾತಿಯ ದ್ವಿತ್ವದ ಸ್ಥಳನಾಮಗಳು, ವಿಜಾತಿಯ ದ್ವಿತ್ವದ ಸ್ಥಳನಾಮಗಳು ಶಾಸನೋಕ್ತ ಸ್ಥಳನಾಮಗಳಿಗಿಂತ ವರ್ತಮಾನ ಉಚ್ಚಾರಣಾರೂಪ ಮತ್ತು ಶಾಬ್ಧಿಕ ವ್ಯತ್ಯಾಸಗಳನ್ನು ಹೊಂದುತ್ತವೆ. ಎಂಬುದನ್ನು ಈ ಕೆಳಕಂಡಂತೆ ಗಮನಿಸಬಹುದು.

**ಸ ಬಿಂದು ಸ್ಥಳನಾಮಗಳು**

| ಕ್ರ. ಸಂ | ಶಾಸನೋಕ್ತ ಸ್ಥಳನಾಮ | ಶಾಸನದ ಕಾಲ ಕ್ರಿ.ಶ | ವರ್ತಮಾನ ಉಚ್ಚಾರಣಾ ರೂಪ | ಶಾಬ್ಧಿಕ ವ್ಯತ್ಯಾಸ |
|---|---|---|---|---|
| 1 | ಕಂಮಱಗೋಡು-ಶಾ.ಸಂ.31 | 1165 | ಕಮ್ಮರಗೋಡು | ಬಿಂದುಲೋಪ ದ್ವಿತ್ವಾಗಮನ<br>ಱ > ರ |
| 2 | ಕೆಂಜಿಗೆಹಾಳಿ-ಶಾ.ಸಂ.86 | 1300 | ಕೆಂಜಿಗೆ | ಉತ್ತರಾರ್ಧ ಲೋಪ |
| 3 | ಹೆಂಮಾಡಿ-ಶಾ.ಸಂ86 | 1300 | ಹೆಮ್ಮಡಿ | ಬಿಂದು ಲೋಪ<br>ಆ-ಲೋಪ<br>ಮ-ದ್ವಿತ್ವಾಗಮನ |
| 4 | ಕುಂದದೂರು-ಶಾ.ಸಂ-86 | 1300 | ಕುಂದೂರು | ದ-ಲೋಪ |
| 5 | ಅಬ್ಬಿಗೊಡಂಗೆ-ಶಾ.ಸಂ90 | 1300 | ಅಬ್ರಗೋಡಿಗೆ | ಸಜಾತೀಯ ದ್ವಿತ್ವ<br>ವಿಜಾತೀಯ ದ್ವಿತ್ವ<br>ದೀರ್ಘ ಸ್ವರ |

| | | | | |
|---|---|---|---|---|
| | | | | ಅ>ಇ<br>ಬಿಂದು ಲೋಪ |
| 6 | ದೇವೀವ್ಪಂದ-ಶಾ.ಸಂ12 | 1371 | ದೇವರುಂದ | ಈ>ಅ<br>ವೃ>ರು ಆಗಮನ |
| 7 | ಹಂತೂರು-ಶಾ.ಸಂ19 | 1406 | ಹಂತೂರು | ---- |
| 8 | ಸಮಾಂಸಿ -ಶಾ.ಸಂ-10 | 1516 | ಸಂಸೆ | ಮಾ-ಲೋಪ<br>ಇ>ಎ |
| 9 | ದೇವವ್ಪಂದ-ಶಾ.ಸಂ14 | 1520 | ದೇವರುಂದ | ವೃ>ರು ಆಗಮನ |
| 10 | ಹೆಂಮಕ್ಕಿ-ಶಾ.ಸಂ 59 | 1500 | ಹೆಮ್ಮಕ್ಕಿ | ಬಿಂದು ಲೋಪ<br>ಮ-ದ್ವಿತ್ವಾಗಮನ |

## ಸಜಾತಿ ದ್ವಿತ್ವದ ಸ್ಥಳ ನಾಮಗಳು

| ಕ್ರಮ ಸಂಖ್ಯೆ | ಶಾಸನೋಕ್ತ ಸ್ಥಳನಾಮ | ಶಾಸನದ ಕಾಲ (ಕ್ರಿ.ಶ) | ವರ್ತಮಾನ ಉಚ್ಚಾರಣಾ ರೂಪ | ಶಾಬ್ದಿಕ ವ್ಯತ್ಯಾಸ |
|---|---|---|---|---|
| 1 | ಪುಕ್ಕೊಳ್ಳಿ-ಶಾ.ಸಂ 13 | 1000 | ವಕ್ಕಳ್ಳಿ | ಪು-ಲೋಪ<br>ವ-ಆಗಮನ<br>ಒ-ಲೋಪ |
| 2 | ಗುತ್ತಿ -ಶಾ.ಸಂ 18 | 1129 | ಗುತ್ತಿ | |
| 3 | ಹನ್ನಿವೂರು-ಶಾ.ಸಂ 20 | 1188 | ಹಂತೂರು | ಬಿಂದು ಆಗಮನ<br>ದ್ವಿತ್ವ ಲೋಪ<br>ವ-ಲೋಪ<br>ತ-ಆಗಮನ |
| 4 | ಬಿಕ್ಕಿ -ಶಾ.ಸಂ 52 | 1500-1600 | ಬಕ್ಕಿ | ಇ-ಅ |
| 5 | ಹೆಂಮಕ್ಕಿ-ಶಾ.ಸಂ 63 | 1500 | ಹೆಮ್ಮಕ್ಕಿ | ಬಿಂದು ಲೋಪ<br>ಮ-ದ್ವಿತ್ವಾಗಮನ |
| 6 | ಅಬ್ಬಿಗೊಡಂಗೆ-ಶಾ.ಸಂ 90 | 1300 | ಅಬ್ರಗೋಡಿಗೆ | ವಿಜಾತಿಯ ದ್ವಿತ್ವ<br>ದೀರ್ಘಸ್ವರ<br>ಅ> ಇ<br>ಬಿಂದು ಲೋಪ |
| 7 | ಕಲ್ಲಿಗೋಡ-ಶಾ.ಸಂ 90 | 1300 | ಕಲಗೋಡು | ದ್ವಿತ್ವ ಲೋಪ<br>ಇ> ಅ |
| 8 | ಯಿನ್ದಳವಳ್ಳಿ-ಶಾ.ಸಂ 1 | 1194 | ಇಂದ್ರವಳ್ಳಿ | ಯಿ-ಲೋಪ<br>ಇ-ಆಗಮನ<br>ಬಿಂದು ಆಗಮನ<br>ವಿಜಾತೀಯ ದ್ವಿತ್ವ ಲೋಪ<br>ಳ-ಲೋಪ<br>ವಿಜಾತೀಯ ದ್ವಿತ್ವ<br>ಆಗಮನ |
| 9 | ಮಾಕೋಡನಹಳ್ಳಿ-ಶಾ.ಸಂ 111 | 1640 | ಮಾಕೋನಹಳ್ಳಿ | ಡ-ಲೋಪ |

## ವಿಜಾತಿ ದ್ವಿತ್ವದ ಸ್ಥಳನಾಮಗಳು

| ಕ್ರಮ ಸಂಖ್ಯೆ | ಶಾಸನೋಕ್ತ ಸ್ಥಳನಾಮ | ಶಾಸನದ ಕಾಲ (ಕ್ರಿ.ಶ) | ವರ್ತಮಾನ ಉಚ್ಚಾರಣಾ ರೂಪ | ಶಾಬ್ದಿಕ ವ್ಯತ್ಯಾಸ |
|---|---|---|---|---|
| 1 | ಯಿನ್ದಳವಳ್ಳಿ-ಶಾ.ಸಂ 1 | 1194 | ಇಂದ್ರವಳ್ಳಿ | ಯಿ-ಲೋಪ<br>ಇ-ಆಗಮನ<br>ಬಿಂದು-ಆಗಮನ<br>ವಿಜಾತೀಯ ದ್ವಿತ್ವಲೋಪ<br>ಳ-ಲೋಪ<br>ವಿಜಾತೀಯ ದ್ವಿತ್ವ<br>ಆಗಮನ |
| 2 | ದೇವೀವ್ಪಂದ-ಶಾ.ಸಂ 12 | 1371 | ದೇವರುಂದ | ಈ>ಅ<br>ವೃ>ರು ಆಗಮನ |
| 3 | ದೇವವ್ಪಂದ-ಶಾ.ಸಂ 14 | 1520 | ದೇವರುಂದ | ವೃ>ರು ಆಗಮನ |
| 4 | ಹಸ್ತಿಯೂರು-ಶಾ.ಸಂ 18 | 1129 | ಹಂತೂರು | ಬಿಂದು ಆಗಮನ<br>ದ್ವಿತ್ವ ಲೋಪ<br>ಮ-ಲೋಪ<br>ತ-ಆಗಮನ |
| 5 | ಕಳ್ಸ-ಶಾ.ಸಂ 59 | 1370 | ಕಳಸ | ದ್ವಿತ್ವ ಲೋಪ<br>ಳ-ಆಗಮನ<br>ಸ-ಆಗಮನ |
| 6 | ಕಳಸ್ತನಾಡು-ಶಾ.ಸಂ 64 | 1400 | ಕಳಸ | ದ್ವಿತ್ವ ಲೋಪ<br>ನಾಡು-ಲೋಪ ಸ-ಆಗಮನ |
| 7 | ರುದ್ರಪಾದ-ಶಾ.ಸಂ 75 | 1897 | ರುದ್ರಪಾದ | |

ಒಟ್ಟಿನಲ್ಲಿ ಈ ಶಾಸನೋಕ್ತ ಸ್ಥಳನಾಮಗಳ ಪೂರ್ಣಪಾಠ ಅಥವಾ ಪ್ರಕಾರವನ್ನು ಅಧ್ಯಯನ ಮಾಡದೆ ಶಾಸನದಲ್ಲಿ ಬರುವ ಸ್ಥಳನಾಮಗಳನ್ನು ಮಾತ್ರ ಉಲ್ಲೇಖಿಸಲಾಗಿದೆ ಈ ಮೇಲಿನ ಶಾಸನೋಕ್ತ ಸ್ಥಳನಾಮಗಳನ್ನು ವ್ಯಕ್ತಿವಾಚಕ, ಪ್ರಾಕೃತಿಕ, ದೈವವಾಚಕ, ದಿಗ್ವಾಚಕ, ಆಡಳಿತ ಸಂಬಂಧಿ, ವ್ಯಾಪಾರೋದ್ಯಮ ಸಂಬಂಧವಾಚಕ ಜಲವಾಚಕ ಹೀಗೆ ಅನೇಕ ಬಗೆಗಳಲ್ಲಿ ನಿರೂಪಿತಗೊಂಡಿದೆ ಮತ್ತು ಬಳಕೆಯಾದ ಭಾಷೆ ಪೂರ್ವದ ಹಳಗನ್ನಡ, ಹಳಗನ್ನಡದಿಂದ ಕೂಡಿದೆ.

ಶಾಸನಗಳಲ್ಲಿ ಇನ್ನೂ ಅನೇಕ ಸ್ಥಳನಾಮಗಳು ಉಲ್ಲೇಖವಾಗಿಲ್ಲ ಆ ಹೊತ್ತಿಗೆ ಅನಿವಾರ್ಯವಾದ ಸ್ಥಳನಾಮಗಳ (ಆಡಳಿತ, ವ್ಯವಹಾರ) ನ್ನು ಮಾತ್ರ ಉಲ್ಲೇಖಿಸಲಾಗಿದೆ. ಇಲ್ಲಿ ಬಳಕೆಯಾಗಿರುವ ಕೆಲವು ಸ್ಥಳನಾಮಗಳ ಬಾಷೆ ಆಡು ಮಾತಿನಿಂದ ಕೂಡಿದುದಾಗಿದೆ ಮತ್ತು ಕೆಲವು ಕಡೆ ಈ ಸ್ಥಳನಾಮಗಳ ಮೇಲೆ ಅನ್ಯ ಭಾಷೆಗಳ ಪ್ರಭಾವ ಉಂಟಾಗಿರುವುದು ಕಾಣಬಹುದು. ಸಾಮಾನ್ಯವಾಗಿ ಶಾಸನಗಳಲ್ಲಿ ಕಂಡು ಬರುವ ಸಂಸ್ಕೃತ ಪದಗಳಲ್ಲಿ **ಶ** ಮತ್ತು **ಷ** ಕಾರಗಳು ತದ್ಭವ ಪದಗಳಲ್ಲಿ **ಸ** ಕಾರವಾಗಿ ಬದಲಾವಣೆಯಾಗಿರುವುದನ್ನು

ಗುರುತಿಸಬಹುದು. ಮತ್ತು ಅಲ್ಪಪ್ರಾಣ, ಮಹಾಪ್ರಾಣಗಳ ಸಂದರ್ಭದಲ್ಲೂ ಈ ಬದಲಾವಣೆಗಳನ್ನು ಗುರುತಿಸಬಹುದು ಭಾಷೆ ನಿಂತ ನೀರಲ್ಲವಾದ್ದರಿಂದ ಅದು ನಿರಂತರವಾದ ಬದಲಾವಣೆ ಹೊಂದುತ್ತಿರುತ್ತದೆ, **ಪ** ಕಾರ **ಹ** ಕಾರವಾಗಿ ಬಳಕೆಯಾಗಿರುವುದನ್ನು ಗಮನಿಸಬಹುದು. ಈ ಶಾಸನಗಳಲ್ಲಿ ಪ್ರಾದೇಶಿಕ ಭಿನ್ನ ರೂಪಗಳ ಬಳಕೆ ಮಾಗಿರುವುದನ್ನು ಗಮನಿಸಬಹುದು. ಹಾಗೂ ಶಕಟರೇಫೆಗಳು ರೇಫೆಗಳಾಗಿರುವುದು ಕಂಡು ಬರುತ್ತದೆ. ಮತ್ತು ಬಿಂದು ಲೋಪವಾಗಿರುವುದೇ ಹೆಚ್ಚು ಹಾಗೂ ವೃ ಕಾರ ರು ಕಾರವಾಗಿದೆ ಹೀಗಾಗಿ ಮೂಡಿಗೆರೆ ತಾಲ್ಲೂಕಿನ ಸ್ಥಳನಾಮಗಳನ್ನು ಇನ್ನೂ ಭಿನ್ನ ಆಯಾಮಗಳಲ್ಲಿ ಅಧ್ಯಯನ ಮಾಡಬಹುದು.

**ಅಡಿ ಟಿಪ್ಪಣಿಗಳು**

೧. ಹು.ಕಾ ಜಯದೇವ್, ಶಾಸನ ಮತ್ತು ಗದ್ಯ, ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ-೨, ಪುಟ-೨೮
೨. ಎಂ.ಎಂ. ಕಲಬುರ್ಗಿ, ಮಾರ್ಗಸಂಪುಟ-೨, ಪುಟ-೨೫೩
೩. ಡಾ. ಚಿ. ಸಿ ನಿಂಗಣ್ಣ, ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಪುಟ-೪೩೩
೪. ಡಾ. ಚಿ. ಸಿ ನಿಂಗಣ್ಣ, ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಪುಟ-೪೩೩

**ಪರಾಮರ್ಶನ ಗ್ರಂಥ**


೧. ಎಪಿಗ್ರಾಫಿಯ ಕರ್ನಾಟಕ ಸಂಪುಟ-೧೧, ೧೯೭೮, ಮೈಸೂರು ವಿ.ವಿ
೨. ಎಪಿಗ್ರಾಫಿಯ ಕರ್ನಾಟಕ ಸಂಪುಟ-೧೨, ೨೦೦೩, ಮೈಸೂರು ವಿ.ವಿ
೩. ಶಾಸನಗಳು ಮತ್ತು ಕನ್ನಡ ಶಾಸ್ತ್ರಿಯತೆ-ಡಾ, ಮಾರುತಿ ಆರ್ ತಳವಾರ, ಡಾ. ರಾಜಶೇಖರ ಮಠಪತಿ
೪. ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ-ಡಾ.ಸಿ.ಯು. ಮಂಜುನಾಥ.